

## ಬಲಮುರಿ/ಎಡಮುರಿ ಕಾಯಿಗಳು

ಸಂಡೂರು ಸಮೀಪವಿರುವ 'ಸ್ವಾಮಿ ಮಲೆ'ಯ ಚಾರಣ ಸಮಯದಲ್ಲಿ ಅಪರೂಪದ 'ಬಲಮುರಿ/ಎಡಮುರಿ' ಸಸ್ಯ ಹಾಗೂ ಕಾಯಿಗಳು ಗಮನಸೆಳೆದವು. ಹಲವಾರು ಔಷಧೀಯ ಗುಣಗಳನ್ನು ಹೊಂದಿರುವ ಬಲಮುರಿ/ಎಡಮುರಿ ಸಸ್ಯ ಪೊದೆಯಂತೆ ಸುಮಾರು 8–10 ಅಡಿ ಎತ್ತರ ಬೆಳೆಯುತ್ತದೆ. ಇಟ್ಟಿಗೆ ಕೆಂಪು ಅಥವಾ ಕಿತ್ತಳೆ ಕೆಂಪು ಹೂಗಳು ನೋಡಲು ಆಕರ್ಷಕವಾಗಿರುತ್ತವೆ. 3–4 ಇಂಚು ಉದ್ದವಿರುವ ಹಸಿರು ಕಾಯಿಗಳ ಆಕಾರ ವಿಶಿಷ್ಟವಾಗಿದ್ದು ನೋಡಲು 'ಸ್ಕ್ರೂ'ನಂತೆ ಕಾಣುತ್ತವೆ. ಒಂದೇ ಗಿಡದಲ್ಲಿ ಎಡಕ್ಕೆ ಹಾಗೂ ಬಲಕ್ಕೆ ಸುರುಳಿ ಸುತ್ತಿದಂತೆ ಕಾಣುವ ಕಾಯಿಗಳು ಬಿಡುತ್ತವೆ. ವೈಜ್ಞಾನಿಕ ಹೆಸರು 'ಹೆಲಿಕ್ಟೆರೆಸ್ ಐಸೋರಾ' (HELICTERES ISORA). ಸಂಸ್ಕೃತದಲ್ಲಿ ಆವರ್ತಿನಿ, ಕನ್ನಡದಲ್ಲಿ ಯದ್ಮರಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಇಂಡಿಯನ್ ಸ್ಕ್ರೂ ಟ್ರೀ ಎಂದು ಕರೆಯುತ್ತಾರೆ. ತೊಗಟೆಯಲ್ಲಿ ಆ್ಯಂಟಿ ಆಕ್ಸಿಡೆಂಟ್‌ಗಳು ಸಮೃದ್ಧವಾಗಿದ್ದು, ಗಿಡದ ತೊಗಟೆಯನ್ನು ಭೇದಿ, ಕರುಳಿನ ಸಮಸ್ಯೆ, ಜಂತುಹುಳುಗಳ ನಿವಾರಣೆ, ಕೊಳೆತ ಗಾಯಗಳನ್ನು ಗುಣಪಡಿಸಲು, ಮಧುಮೇಹ ಹಾಗೂ ಮೂಲವ್ಯಾಧಿ ಚಿಕಿತ್ಸೆಯಲ್ಲಿ ಬಳಸುತ್ತಾರೆ. ಕಾಯಿಗಳನ್ನು ಯಂತ್ರ, ಮಂತ್ರಗಳಲ್ಲಿ ಬಳಸುತ್ತಾರೆ

–ಜಿ. ನಾಗೇಂದ್ರ, ಕಾವೂರು, ಸಂಡೂರು

## ಕೃಷಿಕರ ಮಿತ್ರ ಜೀರುಂಡೆ

ಕಾಡಿನೊಳಗೆ ಸಂಜೆಯ ವೇಳೆಗೆ ಟಿರೀ ಎಂಬ ವಿಚಿತ್ರ ನಾದದಿಂದ ಕತ್ತಲಾಗುತ್ತಿರುವುದನ್ನು ಹೇಳುವ ಈ ಕೀಟ ಜೀರುಂಡೆ. ಸಮುದ್ರ ಮತ್ತು ಧ್ರುವ ಪ್ರದೇಶದ ಹೊರತು ವಿಶ್ವದಾದ್ಯಂತ ಇರುವ ಅದು 83 ಸಾವಿರ ಕೀಟವರ್ಗಗಳಿರುವ ಕಕ್ಸ್ಯು ಲಿಯೋನಿಡೇ ಕುಟುಂಬದ ಸದಸ್ಯ. ಹಸೀ ಸೆಗಣಿಯನ್ನು ಚೆಂಡಿನಂತೆ ಸುತ್ತಿ ಅದರೊಳಗೆ ಮೊಟ್ಟೆಯಿಡುವ ಜೀರುಂಡೆ ಕೃಷಿಯನ್ನು ಬಾಧಿಸುವ ಶಿಲೀಂಧ್ರ, ಗಿಡಹೇನು ಮುಂತಾದ ಕ್ರಿಮಿಕೀಟಗಳನ್ನು ತಿನ್ನುವ ರೈತ ಮಿತ್ರನೂ ಹೌದು.

–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ



## ಹಳದಿ ಕೇಪುಳದ ಹೂಗುಚ್ಛ!

ಮಹಾರಾಷ್ಟ್ರದ ನಮ್ಮ ಸಂಸ್ಥೆಯ ಕೈ ತೋಟದಲ್ಲಿ ಕಸಿ ತಳಿಯ ಈ ಹಳದಿ ಕೇಪುಳದ ಹೂವುಗಳು ಮನ ಸೆಳೆದವು. ತಕ್ಷಣ ಮೊಬೈಲ್ ಕ್ಯಾಮೆರಾದಲ್ಲಿ ಕ್ಲಿಕ್ಕಿಸಿದೆ. ಸಾಮಾನ್ಯವಾಗಿ ಕೆಂಪು ಬಣ್ಣದ್ದಾಗಿರುವ ಇವು ಐದಾರು ಇಂಚು ಅಗಲದ ಗುಚ್ಛ ಪುಷ್ಪಗಳಾಗಿವೆ.

ಕನ್ನಡದಲ್ಲಿ ಕಿಸ್ಕಾರ, ಆಂಗ್ಲದಲ್ಲಿ 'ಇಕ್ಸೊರ' ಹೂವೆಂದು ಗುರುತಿಸಲ್ಪಟ್ಟಿವೆ. ಮಳೆಕಾಡಿನ ಕುರುಚಲು ಗಿಡಗಳಲ್ಲಿ ನೈಸರ್ಗಿಕವಾಗಿ ಈ ಕಾಡುಹೂವುಗಳು ಬೆಳೆಯುತ್ತವೆ. 4 ಎಸಳುಗಳನ್ನು ಹೊಂದಿರುತ್ತವೆ. ಅಪರೂಪಕ್ಕೆ 5 ಎಸಳುಗಳ ಹೂವುಗಳನ್ನೂ ಕಾಣಬಹುದು. ಕರಾವಳಿಯಲ್ಲಿ ದೈವ ದೇವರ ಪೂಜೆಗೆ ಈಗಲೂ ಕಾಡು ಕೇಪುಳದ ಪುಷ್ಪಗಳು ಶ್ರೇಷ್ಠವೆಂದು ಪರಿಗಣಿಸಲ್ಪಡುತ್ತವೆ. ಆದರೆ ಈಗ ಕಾಡು ಹೂವುಗಳೂ ಅಪರೂಪವಾಗಿವೆ. ಪರ್ಯಾಯವಾಗಿ ದೊಡ್ಡ ಗೊಂಚಲಿನ ಆಕರ್ಷಕ ಕಸಿ ಹೂವುಗಳು ಮನೆಯಂಗಳಗಳಲ್ಲಿ ಸ್ಥಾನ ಪಡೆದುಕೊಂಡಿವೆ. ಕಾಡುಹೂವುಗಳು ಮೃದುವಾಗಿದ್ದು ಕಿತ್ತ ಎರಡೇ ದಿನಕ್ಕೆ ಬಾಡಿ ಹೋದರೆ ಕಸಿ ಹೂವುಗಳು ಪ್ಲಾಸ್ಟಿಕ್‌ನಂತೆ ದೃಢವಾಗಿ ಹಲವು ದಿನಗಳವರೆಗೂ ಬಾಡದೆ ನಳನಳಿಸುತ್ತಿರುತ್ತವೆ.

ಕಸಿತಳಿಯೊಂದಿಗೆ ವರ್ಣಾಂತರಗೊಂಡು ಹಳದಿಯಲ್ಲೂ ಶೋಭಿಸುತ್ತಿರುವುದು ಅಚ್ಚರಿಯ ವಿಷಯವೇ ಸರಿ. ಇತ್ತೀಚೆಗೆ ಕಿತ್ತಳೆ, ಶ್ವೇತ ವರ್ಣಗಳಲ್ಲೂ ಲಭಿಸುತ್ತವೆನ್ನುವುದು ಸಸ್ಯ ಶಾಸ್ತ್ರಜ್ಞರ ಅಂಬೋಣವಾಗಿದೆ!

–ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ




### ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

ವಿಳಾಸ: editorsu@sudha.co.in

@SudhaWeekly